ದಿನಾಂಕಃ 11.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿಯರ ಪರ ವಕೀಲರಿಂದಃ**

ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ನನಗೆ ನ್ಯಾಯಾಲಯದಿಂದ ಸಮನ್ಸ ಬಂದಿರುವುದಿಲ್ಲ. ನಾನು ಕಳೆದ 32 ವರ್ಷಗಳಿಂದ ದಸ್ತುಬರಹಗಾರನಾಗಿ ಕೆಲಸ ಮಾಡುತ್ತಿದ್ದೇನೆ. ವಾದಿ ನನಗೆ ಬಹಳ ದಿನಗಳಿಂದ ಪರಿಚಯ ಅಂದರೆ ಸಾಕ್ಷಿಯು ವಾದಿ ಹಾಗೂ ಪ್ರತಿವಾದಿಯರಿಬ್ಬರೂ ನನಗೆ ಪರಿಚಯಸ್ಥರು ಇರುತ್ತಾರೆಂದು ನುಡಿಯುತ್ತಾರೆ. ವಾದಿಗೆ ಸಂಬಂದಿಸಿದ ಸಾಕಷ್ಟು ದಸ್ತಾವೇಜುಗಳನ್ನು ತಯಾರಿಸಿಕೊಟ್ಟಿರುತ್ತೇನೆಂದರೆ ಸರಿಯಲ್ಲ. ದಾವಾಸ್ತಿಯ ಸರ್ವೆ ನಂಬ 296/2 ಇರುತ್ತದೆ. ಅದರ ಚಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ.

ದಾವಾಸ್ತಿಯ ಒಟ್ಟು ಕ್ಷೇತ್ರ 17 ಎಕರೆ ಚಿಲ್ಲರೆ ಗುಂಟೆ ಇರುತ್ತದೆ. ನಿಪಿ3 ಖರೀದಿ ಕರಾರು ಪತ್ರವನ್ನು ಬರೆಸಲು ವಾದಿ, ಪ್ರತಿವಾದಿ ಮತ್ತು ಇಬ್ಬರು ಸಾಕ್ಷಿದಾರರು ನನ್ನ ಕಚೇರಿಗೆ ಬಂದಿದ್ದರು. ಆ ದಿನ ಪ್ರತಿವಾದಿಯ ಹೆಂಡತಿ, ಮಕ್ಕಳು ಬಂದಿರಲಿಲ್ಲ. ನಿಪಿ3 ನ್ನು ಬರೆಯಲು ಪ್ರತಿವಾದಿಯೇ ಮಾಹಿತಿ ನೀಡಿರುತ್ತಾನೆ. ದಾವಾಸ್ತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೀರಾ? ಎಂಂದರೆ ಸಾಕ್ಷಿಯು ಪಹಣಿಪತ್ರಿಕೆಯನ್ನು ನೋಡಿರುತ್ತೇನೆಂದು ಹೇಳುತ್ತಾರೆ.

ದಾವಾಸ್ತಿ ಪ್ರತಿವಾದಿಗೆ ವಾರಸಾ ನಾತೆಯಿಂದ ಬಂದಿರುತ್ತದೆ. ಆದ್ದರಿಂದ ದಾವಾಸ್ತಿಗೆ ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳು ಸಹ ಹಕ್ಕುದಾರರು ಇರುತ್ತಾರೆಂದರೆ ನಿಜ. ದಾವಾಸ್ತಿ ಸರ್ವೆ ನಂಬರನ ಪೈಕಿ 02 ಎಕರೆ 14 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಖರೀದಿ ಕರಾರು ಪತ್ರವನ್ನು ಮಾಡಲಾಗಿರುತ್ತದೆ. ಸದರಿ ಜಮೀನನ್ನು ರೂ.9 ಲಕ್ಷಗಳಿಗೆ ಮಾರಾಟ ಮಾಡುವುದಾಗಿ ಆ ಪೈಕಿ ರೂ.8,80,000/- ಗಳನ್ನು ಮುಂಗಡವಾಗಿ ವಾದಿಯು ಪ್ರತಿವಾದಿಗೆ ಕೊಟ್ಟಿರುತ್ತಾನೆ.

ಸದರಿ ರೂ.8,80,000/- ರ ಪೈಕಿ ಮುಂಚೆ ಮತ್ತೊಂದು ಖರೀದಿ ಕರಾರು ಪತ್ರವಾಗಿದ್ದು, ಆ ಸಮಯದಲ್ಲಿ ರೂ. 7,60,000/- ಹಣವನ್ನು ವಾದಿ ಪ್ರತಿವಾದಿಗೆ ಕೊಟ್ಟಿದ್ದು, ನನ್ನ ಸಮಕ್ಷಮ ರೂ.1,20,000/- ಗಳನ್ನು ನಿಪಿ 3 ರಂತೆ ಖರೀದಿ ಕರಾರು ಪತ್ರ ಬರೆಯುವಾಗ ಕೊಟ್ಟಿರುತ್ತಾರೆ. ಸದರಿ ಮೊತ್ತವನ್ನು ವಾದಿಯು ಪ್ರತಿವಾದಿಗೆ ನಗದು ರೂಪದಲ್ಲಿ ರೂ.500/- ಮುಖಬೆಲೆಯ 240 ನೋಟುಗಳನ್ನು ಕೊಟ್ಟಿರುತ್ತಾರೆ. ಮೊದಲಿನ ಖರೀದಿ ಕರಾರು ಪತ್ರದ ಪ್ರಕಾರ ರೂ.7,60,000/- ಮುಟ್ಟಿದ ಬಗ್ಗೆ ಪ್ರತಿವಾದಿಯೇ ಮಾಹಿತಿ ನೀಡಿರುತ್ತಾನೆ. ಸದರಿ ಪತ್ರವನ್ನು ನಾನು ನೋಡಿರುವುದಿಲ್ಲ ಆದರೆ ಪ್ರತಿವಾದಿಯು ಮೌಖಿಕವಾಗಿ ಹೇಳಿರುತ್ತಾನೆ. ಆ ಬಗ್ಗೆ ನಾನು ದಾಖಲೆಯನ್ನು ನೋಡಿರುವುದಿಲ್ಲ ಎಂದರೆ ಸಾಕ್ಷಿಯು ಕರಾರು ಪತ್ರವನ್ನು ನೋಡಿರುತ್ತೇನೆಂದು ನುಡಿಯುತ್ತಾರೆ. ಸದರಿ ಕರಾರು ಪತ್ರವು ದಿ.16.02.2015 ರಂದು ಆಗಿರುತ್ತದೆ. ನಿಪಿ3 ನ್ನು ದಿ. 16.02.2018 ರಂದು ಬರೆದಿರುತ್ತೇನೆ. ಸದರಿ ನಿಪಿ3 ಕ್ಕೆ ಸಾಕ್ಷಿದಾರರಾಗಿ 1. ಶ್ರೀಕಾಂತ ಸಿದ್ದಾಪೂರ , 2. ಮಲ್ಲಪ್ಪ ಸಣ್ಣಕ್ಕಿರವರು ಸಹಿ ಹಾಕಿರುತ್ತಾರೆ. ನಿಪಿ3 ಕ್ಕೆ ಪ್ರತಿವಾದಿಯ ಹೆಂಡತಿ, ಮಕ್ಕಳ ಸಹಿ ಪಡೆಯುವಂತೆ ನಾನು ಪ್ರತಿವಾದಿಗೆ ಹೇಳಿರುತ್ತೇನೆ ಅದಕ್ಕೆ ಪ್ರತಿವಾದಿಯು ಖರೀದಿ ಪತ್ರಕ್ಕೆ ಸಹಿ ಹಾಕಿಸುವುದಾಗಿ ಹೇಳಿರುತ್ತಾನೆ. ಮೇಲೆ ಹೇಳಿದ ಮೊದಲನೇ ಖರೀದಿ ಕರಾರು ಪತ್ರದಂತೆ ಪ್ರತಿವಾದಿಯು ವಾದಿಗೆ ತಾನು ತೆಗೆದುಕೊಂಡ ಹಣವನ್ನು ಕೊಟ್ಟಿರುವ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಮೊದಲನೆ ಖರೀದಿ ಕರಾರು ಪತ್ರವನ್ನು ರದ್ದುಪಡಿಸುವ ಸಲುವಾಗಿ ವಾದಿ ಮತ್ತು ಪ್ರತಿವಾದಿಯರು ನನ್ನ ಹತ್ತಿರ ಬಂದಿದ್ದು, ಅದರ ಪ್ರಯೋಜನ ಪಡೆದುಕೊಂಡು ವಾದಿಯೊಂದಿಗೆ ಶಾಮೀಲಾಗಿ ನಿಪಿ3ನ್ನು ಖೊಟ್ಟಿಯಾಗಿ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಲುಕ್ಸಾನ ಮಾಡುವ ಉದ್ದೇಶದಿಂದ ನಾನು, ವಾದಿ ಮತ್ತು ಸಾಕ್ಷಿದಾರರು ಮಿಲಾಪಿಯಾಗಿ

ಖೊಟ್ಟಿ ಕಾಗದವನ್ನು ತಯಾರಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ